

ಕಾರಣದಿಂದ ಶ್ರಾವಣದ ಚೆಲುವು ಹೆಚ್ಚಾಯಿತೋ ಬಿಡಿಸಿ ಹೇಳುವುದು ಕಷ್ಟ. ಶ್ರಾವಣದ ಆಗಮನವನ್ನು ಬೇಂದ್ರೆ ಬಣ್ಣಿಸುವ ಪರಿಯನ್ನು ನೋಡಿ:

**ಶ್ರಾವಣಾ ಬಂತು ಕಾಡಿಗೆ / ಬಂತು ನಾಡಿಗೆ**
**ಬಂತು ಬೀಡಿಗೆ / ಶ್ರಾವಣಾ ಬಂತು ||ಪಲ್ಲವಿ||**
**ಕಡಲಿಗೆ ಬಂತು ಶ್ರಾವಣಾ / ಕುಣಿದ್ಹಾಂಗ ರಾವಣಾ**
**ಕುಣಿದಾವ ಗಾಳಿ / ಭೈರವನೆ ರೂಪ ತಾಳಿ**

ಶ್ರಾವಣದ ಸಂಭ್ರಮವನ್ನು ಚಿತ್ರಿಸಲಿಕ್ಕೆ ಕವಿಗೆ ರಾವಣನ ಕುಣಿತವೂ ಬೇಕು, ಭೈರವನ ರೂಪವೂ ಬೇಕು. ನಾಡಿಗೆ ಬೀಡಿಗೆ ಬಂದ ಈ ಸಂಭ್ರಮ ಘಟ್ಟಕ್ಕೆ, ರಾಜ್ಯಪಟ್ಟಕ್ಕೆ, ಬಾನಮಟ್ಟಕ್ಕೂ ಬಂದುದನ್ನು ಕವಿ ಕಾಣಿಸುತ್ತಾನೆ; ಮನಿಮನಿಗೆ ಬಂದ ಶ್ರಾವಣದ ಕಾರಣದಿಂದ, 'ಒಡೆದಾವ ಹಾಡೂ ರಸ ಉಕ್ಕತಾವ ನೋಡು' ಎಂದು ಉದ್ಗರಿಸುತ್ತಾನೆ. ಬೆಟ್ಟ ಕುತನಿಯ ಅಂಗಿ ತೊಡುವುದು, ಬನ ಬನಗಳು ತಲೆಗೆ ಬಾಸಿಂಗ ಕಟ್ಟಿಕೊಂಡು ಮದುಮಗನ ವೇಷ ತಾಳುವುದು, ನೆಲ–ಹೊಲಗಳು ಹಸಿರುಟ್ಟ ಬಸುರಿಯಂತೆ ಕಂಗೊಳಿಸುವುದು, ಗುಡ್ಡ ಗುಡ್ಡ ಸ್ಥಾವರ ಲಿಂಗಗಳಿಗೆ ಮೋಡಗಳಿಂದ ಅಭ್ಯಂಗ – ಶ್ರಾವಣದ ಹಿನ್ನೆಲೆಯಲ್ಲಿ ಇಂಥ ಅದ್ಭುತ ಚಿತ್ರಗಳು ವರಕವಿಗಷ್ಟೇ ದಕ್ಕಲಿಕ್ಕೆ ಸಾಧ್ಯ. ಶ್ರಾವಣವನ್ನು ಬಣ್ಣಿಸುತ್ತ, 'ಕುಣಿತಾದ, ತಾನ ದಣಿತಾದ' ಎನ್ನುತ್ತಾರೆ ಬೇಂದ್ರೆ. ಕವಿತೆಯನ್ನು ಓದಿನೋಡಿ, ಶ್ರಾವಣದ ಹೆಸರಿನಲ್ಲಿ ಪದ ಪದಗಳೂ ಗೆಜ್ಜೆ ಕಟ್ಟಿಕೊಂಡು ಇಡೀ ಕವಿತೆಯೇ ಕುಣಿದಂತೆ ಕಾಣಿಸುತ್ತದೆ. ಶ್ರಾವಣದ ಹಿಂದಿನ ಶ್ರವಣ ಎನ್ನುವ ವಿಶೇಷಣ ಕವಿತೆಯ ಸಾಲುಸಾಲಿನಲ್ಲೂ ಸಹೃದಯರ ಅನುಭವಕ್ಕೆ ವೇದ್ಯವಾಗುತ್ತದೆ.

## 'ಏಕೆ ಚಿಂತಿಸುವೆ... ಸತಿಯೇ...

–ಸುಬ್ರಾಯ ಚೊಕ್ಕಾಡಿ, ಕವಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರಾವಣ ಮಾಸದಲ್ಲಿ ದೊಡ್ಡ ಹಬ್ಬಗಳೇನೂ ಇಲ್ಲ. ಶ್ರಾವಣ ಅಂದರೆ ಜೋರು ಮಳೆ. ಆ ಮಳೆಯ ಮೂಲಕ ಭಯ! ಶ್ರಾವಣ ಮತ್ತು ಮಳೆ ಅಂದರೆ ಬಹುತೇಕರಿಗೆ ಸೌಂದರ್ಯ ಪ್ರಜ್ಞೆ ಕಾಣುತ್ತದೆ. ಆದರೆ ನನಗೆ ಭಯದ ಪ್ರಜ್ಞೆ ಮೊದಲನೆಯದ್ದಾಗುತ್ತದೆ!

ನಾನು 10ರಿಂದ 12 ವರ್ಷದ ಹುಡುಗ. ಹಳ್ಳಿಯಲ್ಲಿ ಎರಡು ಕೊಠಡಿಗಳ ಚಿಕ್ಕ ಮಣ್ಣಿನ ಮನೆ. ಬಿದಿರಿನ ಮಹಡಿಗೆ ಹುಲ್ಲು ಹೊದಿಸಿದ್ದರು. ಶ್ರಾವಣ ಮಾಸದ ಒಂದು ರಾತ್ರಿ ಜೋರು ಮಳೆ. ಮಾಡಿನ ಹುಲ್ಲೆಲ್ಲಾ ಹಾರಿ ಬಟಾ ಬಯಲು. ಮನೆಯೊಳಗಿಂದ ಆಕಾಶ ಕಂಡಿತು. ಜೋರು ಗುಡುಗು, ಮಿಂಚು. ಮನೆಯಲ್ಲಿ ಇದ್ದವರೆಲ್ಲ ತೊಯ್ದು ಹೋದೆವು. ಒಂದು ಸಣ್ಣ ಕೊಠಡಿಗೆ ಅಡಿಕೆ ಪಟ್ಟೆ ಹೊದಿಸಲಾಗಿತ್ತು. ಅದರೊಳಗೆ ರಾತ್ರಿ ಕಳೆದೆವು.



ಅಮ್ಮ ಮಳೆ ನಿಲ್ಲಲಿ ಎಂದು, 'ರಾಮ... ರಾಮ... ರಾಮ...' ಎಂದು ಜಪ ಮಾಡುತ್ತಿದ್ದರು. ತಂದೆ ಯಕ್ಷಗಾನ ಭಾಗವತರು. ಅಷ್ಟು ಮಳೆ ಸುರಿಯುತ್ತಿದ್ದರೂ ಅವರು ಎಷ್ಟು ನಿರಾಳ ಎಂದರೆ 'ಏಕೆ ಚಿಂತಿಸುವೆ... ಬಾಯಿ ಬಸವಳಿಯೇ... ಸತಿಯೇ' ಎಂದು ಹಾಡು ಹೇಳುತ್ತಿದ್ದರು. ಆ ಹಾಡಿನಲ್ಲಿ ಮೈ ಮರೆಯುವ ಸ್ಥಿತಿ ಅವರದ್ದಾಗಿತ್ತು.

ಮರುದಿನ ನನ್ನ ತಂದೆ ಮಾಡಿಗೆ ಹೊದಿಸಬೇಕಾಗಿದ್ದ ಹುಲ್ಲು ಹುಡುಕಿ ಹೊರಟರು. ನಾನು ಆ ಹುಲ್ಲನ್ನು ಹೊದಿಸಲು ಆಳುಗಳನ್ನು ಹುಡುಕಿ ಹೊರಟೆ. ಹುಲ್ಲು ಹೊದಿಸಲು ಪರಿಣತರೇ ಬೇಕಾಗಿತ್ತು. ಎರಡು ದಿನ ಯಾರೂ ಸಿಗಲಿಲ್ಲ. ಮತ್ತೆ ಎರಡು ದಿನ ಮಳೆಯಲ್ಲಿಯೇ ತೊಯ್ದೆವು.

ನಮ್ಮ ಮನೆಯ ಹಿಂಭಾಗದಲ್ಲಿ 10ರಿಂದ 15 ಅಡಿ ಎತ್ತರದ ಗುಡ್ಡವಿತ್ತು. ಜೋರು ಮಳೆ ಬಂದಾಗ ಗುಡ್ಡ ಜರುಗಿ ಮಣ್ಣು ಮನೆಯ ಹತ್ತಿರ ಬರುತ್ತಿತ್ತು. ಆ ಮಣ್ಣನ್ನು ತೆಗೆಯುವ ಕೆಲಸ.

ಮನೆ ಎದುರು ಬಂಟಮಲೆ ಎನ್ನುವ ಗುಡ್ಡವಿತ್ತು. ಮಳೆಗಾಲದಲ್ಲಿ ಆ ಗುಡ್ಡಕ್ಕೆ ಪೂರ್ಣವಾಗಿ ಮಂಜು ಮುಸುಕುತ್ತಿತ್ತು. ಆಗ ಆ ಗುಡ್ಡ ಗುಮ್ಮನ ರೀತಿ ಕಾಣುತ್ತಿತ್ತು.

ಹೀಗೆ ಶ್ರಾವಣ ಅಂದರೆ ಭಯದ ವಾತಾವರಣ! ಜೋರು ಮಳೆ ಬಂದು ಯಾವಾಗ ಎಲ್ಲಿ ಏನು ಅನಾಹುತ ಆಗುತ್ತದೆಯೋ ಎನ್ನುವುದೇ ಆ ಭಯಕ್ಕೆ ಕಾರಣ. ಇದೆಲ್ಲವೂ ನನ್ನ ಬಾಲ್ಯದ ಶ್ರಾವಣ ಮತ್ತು ಮಳೆಯ ನೆನಪುಗಳು.

ಈಗ ಹುಲ್ಲಿನ ಮನೆಯೇನೂ ಇಲ್ಲ. ಅಂದಿನಂತೆ ವಿಪರೀತವಾದ ಮಳೆಯೂ ಇಲ್ಲ. ಆದರೆ ಶ್ರಾವಣ ಹಾಗೂ ಜೋರು ಮಳೆ ಬಂದಾಗ ಭಯ ಆಗುತ್ತದೆ.

ನಮ್ಮ ಮನೆಯ ಬಳಿ ಸಣ್ಣ ಹೊಳೆ ಹರಿಯುತ್ತದೆ. ವಿಪರೀತ ಮಳೆ ಬಂದಾಗ ಆ ಹಳ್ಳ ತುಂಬಿ ನೀರೆಲ್ಲವೂ ನಮ್ಮ ತೋಟ ಪ್ರವೇಶಿಸುತ್ತಿತ್ತು. ಇಡೀ ತೋಟ ಕೆಂಪಾಗಿ ಕಾಣುತ್ತಿತ್ತು. ಈಗಲೂ ಹೆಚ್ಚು ಮಳೆ ಬಂದಾಗ ಇಂತಹದ್ದೇ ಸ್ಥಿತಿ ಕಾಣುತ್ತೇವೆ.

ಬೇಂದ್ರೆ ಅವರು ಶ್ರಾವಣ ಪದ್ಯದಲ್ಲಿ 'ಕುಣಿದ್ಹಾಂಗ ರಾವಣ' ಎನ್ನುತ್ತಾರಲ್ಲ. ಆ ದೃಷ್ಟಿಯಲ್ಲಿ ನೋಡುವುದಾದರೆ ದಕ್ಷಿಣ ಕನ್ನಡದ ಮಳೆ ನಿಜಕ್ಕೂ ರಾವಣನೇ. ಈ ಕಾರಣಕ್ಕೆ ನನಗೆ ಶ್ರಾವಣ ಅಂದರೆ ಮಳೆ, ಮಳೆ ಅಂದರೆ ಭಯ!